ಸಿ.ಮಿಸಲೆನಿಯಸ್ ನಂ 1/2024
ಪಿ.ಡಬ್ಲ್ಯು –1

ದಿನಾಂಕ : 26–06–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟಿ ಸವಾಲು 2 ನೇ ಎದುರುದಾರ ಪರ ಶ್ರೀ: ಪಿ ಪಿ ವಕೀಲರಿಂದ :**

ಇದಕ್ಕಿಂತ ಮೊದಲು ರಾಯಚೂರಿನಲ್ಲಿ ಕೇಸ ಆಗಿದೆ ಅದರೆ ಎಷ್ಟು ಕೇಸ ಮಾಡಿದ್ದೇನೆ ನೆನಪಿಲ್ಲಾ. ರಾಯಚೂರಿನಲ್ಲಿ ನನ್ನ ತಂದೆಯ ಅಸ್ತಿ ನನಗೆ ಬರಬೇಕು ಅಂತಾ ಕೇಳಿ ಹಾಕಿದ್ದೇನೆ. ರಾಯಚೂರಿನಲ್ಲಿ ಎಷ್ಟು ವರ್ಷದ ಹಿಂದೆ ಕೇಸ ಹಾಕಿದ್ದೆ ನೆನಪಿಲ್ಲಾ. ಈ ಕೇಸಗೆ ನಾನು ಮತ್ತು ನನ್ನ ಗಂಡ ಮಾಹಿತಿ ಕೊಟ್ಟಿದ್ದೇವೆ. ಮರಿಬಸನಗೌಡ ಇವರ ಮಗನಿಗೆ ನಾನು ಕೇಸ ಕೊಟ್ಟಿದ್ದೆ. ಯಮನಪ್ಪ ನನ್ನ ಮೇಲೆ ಒಂ ದು ಕೇಸ ಮಾಡಿದ್ದಾನೆ ಎಂದರೆ ಹೌದು ಅದರೆ ಅದು ನನಗೆ ಸಂಬಂದ ಇಲ್ಲಾ. ಅದರ ಬಗ್ಗೆ ನನಗೆ ಮಾಹಿತಿ ಇಲ್ಲಾ. ನನ್ನ ಸ್ವಂತ ಊರು ಗದ್ದರಟಗಿ. ನನ್ನ ತಂದೆ ನಾವು ಚಿಕ್ಕವರಿದ್ದಾಗಲೇ ದೇಶಾಂತರ ಹೋಗಿದ್ದಾರೆ ಎಂದರೆ ಸರಿ. ನನ್ನ ತಾಯಿ ಕೂಡಾ ನಾವು ಚಿಕ್ಕವರಿರುವಾಗ ಮೃತ ಪಟ್ಟಿದ್ದಾರೆ ಎಂದರೆ ಸರಿ. ನಾನು ನಮ್ಮ ಅಜ್ಜನ ಮನೆಯಲ್ಲಿ ಬೆಳೆದಿದ್ದೇನೆ ಎಂದರೆ ಸರಿ. ನನ್ನ ಗಂಡನ ಊರು ಮಟ್ಟೂರು. ನಾನು ಮಟ್ಟೂರುನಲ್ಲಿ ಈಗಲೂ ಇದ್ದೇನೆ ಎಂದರೆ ಸರಿ ಮತ್ತು ಗದ್ದರಟಗಿ ಹೋಗಿ ಬರುತ್ತೇನೆ ಅಂತಾ ಹೇಳುತ್ತಾರೆ.

2. ರಾಯಚೂರಿನಲ್ಲಿ ಕೇಸ ಬಗ್ಗೆ ಎಷ್ಟು ವರ್ಷ ಓಡಾಡಿದ್ದೇನೆ ನೆನಪಿಲ್ಲಾ ನಂತರ ಅದು ಲಿಂಗಸೂಗೂರು ನ್ಯಾಯಾಲಯಕ್ಕೆ ಬಂದಿದೆ. ಲಿಂಗಸೂಗೂರ ನ್ಯಾಯಾಲಯಕ್ಕೆ ಎಷ್ಟು ವರ್ಷ ಓಡಾಡಿದ್ದೇವೆ ನೆನಪಿಲ್ಲಾ. ಈ ಕೇಸು ಎಷ್ಟು ವರ್ಷದ ಹಿಂದೆ ಮುಗಿದಿದೆ ಎಂದು ಸಾಕ್ಷಿಗೆ ಕೇಳಲು ಅವರು ಈಗ ಒಂದು ವರ್ಷದ ಹಿಂದೆ ನನಗೆ ಗೊತ್ತಿಲ್ಲದ ಹಾಗೇ ಮ್ಯೂಟೇಷನ ಮಾಡಿಸಿಕೊಂಡಿದ್ದಾರೆ ಅಂತಾ ಹೇಳುತ್ತಾರೆ. ಹಿಂದಿನ ವಕೀಲರಿಗೆ ಕೇಸ ಮುಗಿದಿದೆ ಅಂತಾ ಕೇಳಿದ್ದೇನೆ ಅವರು ಲಿಂಗಸೂಗೂರು

ನ್ಯಾಯಾಲಯದಲ್ಲಿ ಇನ್ನೂ ನಡೆದಿದೆ ಅಂತಾ ಹೇಳಿದರು. ಈ ಕೇಸ ಹಾಕುವ ಮೊದಲು ಕೂಡಾ ಅವರನ್ನು ಕೇಳಿದೆ ಅವರು ಇನ್ನೂ ಕೇಸ ನಡೆಯುತ್ತಿದೆ ಅಂತಾ ಹೇಳಿದರು. ಈ ಕೇಸ ನನ್ನಂತೆ ಅಗಿದೆ ಅಂತಾ ನಾನು ತಿಳಿದುಕೊಂಡಿದ್ದೆ ಅವರು ಮ್ಯೂಟೇಷನ ಮಾಡಿಸಿಕೊಂಡ ನಂತರ ನನಗೆ ವಿಷಯ ತಿಳಿದಿದೆ ಅಂತಾ ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿ. ಒಂದು ವರ್ಷದ ಹಿಂದೆ ತಮ್ಮ ಹೆಸರಿಗೆ ಹೊಲ ಮಾಡಿಕೊಂಡಿದ್ದಾರೆ ಅದಕ್ಕೆ ಕೇಸ ಮಾಡಿದ್ದೇನೆ ಅಂತಾ ಹೇಳುತ್ತಾರೆ. ಈ ಹಿಂದೆ ಕೇಸ ನನ್ನಂತೆ ಅಗಿಲ್ಲಾ ಅದಕ್ಕೆ ನಾನು ಈ ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

3. ನಾನು ಈ ಹಿಂದೆ ಒಂದು ಲಕ್ಷ ಹಣ ತೆಗೆದುಕೊಂಡು ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸುಳ್ಳು . ಈಗ ಸಾಕ್ಷಿಗೆ ರಾಜಿ ಅರ್ಜಿ ತೋರಿಸಿ ನಿಪಿ 2 ಕ್ಕೆ ನೀವೇ ಸಹಿ ಮಾಡಿದ್ದೀರಿ ಎಂದರೆ ಇಲ್ಲಾ ಎಂದು ಹೇಳುತ್ತಾರೆ. ನಾನು ಆ ಕೇಸನಲ್ಲಿ ಹಣ ತೆಗೆದುಕೊಂಡು ಯಮನಪ್ಪ ಆ ಹೊಲಕ್ಕೆ ಮಾಲೀಕಾ ಅಂತಾ ಒಪ್ಪಿಕೊಂಡಿದ್ದೇನೆ ಎಂದರೆ ಸುಳ್ಳು. 2008 ರಲ್ಲಿ ಒಂದು ಲಕ್ಷ ಹಣ ಅದು ದೊಡ್ಡ ಮೊತ್ತ ಎಂದರೆ ಇರಬಹುದು. ಈಗ ಭೂಮಿಯ ಬೆಲೆ ಹೆಚ್ಚಾಗಿದ್ದರಿಂದ ಮತ್ತೆ ಹಣ ತೆಗೆದುಕೊಳ್ಳಬೇಕು ಅಂತಾ ದುರುದ್ದೇಶದಿಂದ ಈ ಕೇಸ ಹಾಕಿದ್ದೇನೆ ಎಂದರೆ ಸರಿಯಲ್ಲ. 2008 ರಿಂದ ಡಿಕ್ರಿ ಆದಾಗಿನಿಂದಾ ಯಮನಪ್ಪನೆ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಯಾವತ್ತು ಇಲ್ಲಾ ಎಂದರೆ ಸರಿಯಲ್ಲ. 2008 ರಿಂದ ಇಲ್ಲಿಯವರೆಗೆ 16 ವರ್ಷ ಕಳೆದಿವೆ ಎಂದರೆ ತಪ್ಪು. ನಾವು 2008 ರಿಂದ ಇಲ್ಲಿಯವರೆಗೆ ನಮ್ಮ ಹೆಸರಿಗೆ ಯಾಕೆ ಮಾಡಿಸಿಕೊಂಡಿಲ್ಲಾ ಎಂದು ಕೇಳಿದರೆ ಮಾಡಿಸಿಕೊಂಡಿದ್ದೆವು ಈಗ ಒಂದು ವರ್ಷದ ಹಿಂದೆ ಅವರು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಅಂತಾ ಹೇಳುತ್ತಾರೆ. ಯಮನಪ್ಪ ದಾವಾ ಆಸ್ತಿಯ ಮಾಲೀಕಾ ಅಂತಾ ನಾನೇ ಒಪ್ಪಿಕೊಂಡ ಕಾರಣ ಆ ಆಸ್ತಿ ಅವರ ಹೆಸರಿಗೆ ಮಾಡಿದ್ದಾರೆ ಎಂದರೆ ಸರಿಯಲ್ಲ . ರಾಜಿ ಡಿಕ್ರಿ ಮೋಸದಿಂದ ಮಾಡಿದ್ದಾರೆ ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ರಾಜಿ ಡಿಕ್ರಿಯನ್ನು ನನಗೆ ಓದಿ ಹೇಳಿದ ನಂತರವೇ ನಾನು ಅದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸುಳ್ಳು. ಯಮನಪ್ಪನ ಹೆಸರಿಗೆ ಮ್ಯೂಟೇಷನ ಅಗಿದೆ ಅಂತಾ ನನಗೆ ಒಂದು

ವರ್ಷದ ಹಿಂದೆ ತಿಳಿಯಿತು. ನನಗೆ ವಿಷಯ ತಿಳಿದ ನಂತರ ಒಂದು ವರ್ಷದ ಒಳಗೆ ಕೇಸ ಮಾಡಿದ್ದೇನೆ. ನಾನು ಈ ಹಿಂದೆ ಯಮನಪ್ಪ ಮಾಲೀಕಾ ಅಂತಾ ಒಪ್ಪಿಕೊಂಡಿದ್ದ ಕಾರಣ ಮತ್ತು ಕೇಸ ಬಗ್ಗೆ ನನಗೆ ಮಾಹಿತಿ ಇರುವ ಕಾರಣ ನಾನು ಇಲ್ಲಿಯವರೆಗೆ ಕೇಸ ಮಾಡದೆ ಸುಮ್ಮನಿದ್ದೆ ಎಂದರೆ ಸರಿಯಲ್ಲ. ಹಿಂದಿನ ವಕೀಲರಿಂದ ನಾನು ಕಾಗದ ಪತ್ರ ಹಿಂಪಡೆದಿದ್ದೇನೆ ಅದನ್ನು ಈ ಕೇಸನಲ್ಲಿ ಹಾಕಿದ್ದೇನೆ. ನನ್ನ ಪ್ರಕಾರಣ ಆ ಕೇಸ ನನ್ನಂತೆ ಅಗಿದೆ ಅಂತಾ ಇದೆ. ನಾನು ಹಿಂದೆ ಹಣ ತೆಗೆದುಕೊಂಡು ಈಗ ಎದುರುದಾರರಿಗೆ ತೊಂದರೆ ಕೊಡಬೇಕು ಅಂತಾ ಈ ಸುಳ್ಳು ಕೇಸ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

Sd/-

**( (ಉಂಡಿ ಮಂಜುಳಾ ಶಿವಪ್ಪ )**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಲಿಂಗಸೂಗುರು.**